ಮಾಡಿರುವುದೇನೆಂದರೆ, ''ರಕ್ಷಣೆ ಇದೆ ಎಂಬ ಕಾರಣದಿಂದ'' ಅನಗತ್ಯವಾಗಿ ರಕ್ಷಣೆ ಈ ಸಭೆ ಕೊಡುತ್ತದೆ ಎಂಬ ಇಂಪ್ಯುಟೇಷನ್ ಸಭೆಯಲ್ಲೂ ಬಂತು. ''ವಿಧಾನ ಮಂಡಲದಲ್ಲಿ ಚರ್ಚಿಸಬಾರದೆಂದು ವಾದಿಕೆ ಇದ್ದರೂ ಮಾಡಿದ್ದಾರೆ'' ಅಂದರೆ ಸ್ಪೀಕರ್ ಅವರಿಗೂ ಜ್ಞಾನಾರ್ಜನೆ ಇಲ್ಲ ಎಂದು ಆಯಿತು. ಅವಕಾಶ ಮಾಡಿಕೊಟ್ಟುಬಿಟ್ಟಿದ್ದಾರೆ; Speaker is insufficient in his knowledge about conducting the business. ಎಂದಾಗುತ್ತದೆ. ''ಮತ್ತು ನ್ಯಾಯಾಲಯದ ಅಂತಿಮ ಆಜ್ಞೆಯನ್ನು ಕಡೆಗಣಿಸಿ ವರ್ತಿಸಿರುವುದು ನ್ಯಾಯಾಲಯಕ್ಕೆ ಅವಹೇಳನ ಮಾಡಿದಂತಾಗುತ್ತದೆ'' ಅಂದರೆ, ನ್ಯಾಯಾಲಯಕ್ಕೆ ಅವಹೇಳನ ಮಾಡುವುದಕ್ಕೆ ಸ್ಪೀಕರ್‌ರವರು ಮತ್ತು ಈ ಸಭೆ ಅವಕಾಶ ಕೊಟ್ಟಿದೆ ಎಂದು; ಇವೆಲ್ಲವೂ ಪ್ರಿವಿಲೇಜ್ ಆಗುತ್ತದೆ. ಇದಕ್ಕೆ ಚರ್ಚೆ ಏನೂ ಬೇಕಾಗಿಲ್ಲ. ಇದನ್ನು ಪ್ರಿವಿಲೇಜ್ ರೆಫರ್ ಮಾಡಿಬಿಟ್ಟರೆ ಆಯಿತು.

ವೈಸ್ ಛೇರ್ಮನ್: ಇದರ ಬಗ್ಗೆ ನಿರ್ಣಯವನ್ನು ಆನಂತರ ಹೇಳುತ್ತೇನೆ.

ವಿಷಯ: ತಮಿಳುನಾಡು ಮುಖ್ಯಮಂತ್ರಿಯವರು ಪೊಲೀಸರ ಮೇಲೆ ಮಾಡಿರುವ ಹೇಳಿಕೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ,....

ಛೇರ್ಮನ್: ಮಾನ್ಯ ಶಿವಕುಮಾರ್‌ರವರೇ ತಮ್ಮ ನೋಟೀಸ್ ಬಂದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ತಮಿಳುನಾಡಿನ ಮುಖ್ಯ-ಮಂತ್ರಿಯವರಾದ ಕರುಣಾನಿಧಿಯವರು ಪೊಲೀಸರ ಬಗ್ಗೆ ರಿಮಾರ್ಕ್ಸ್ ಮಾಡಿದ್ದಾರೆ. ನಮ್ಮ ಪೊಲೀಸಿನವರು ಏನು ಮಾಡಿದ್ದಾರೆಂದು ಚರ್ಚೆಯಾಗಲೇಬೇಕು. ನಮ್ಮ ಪೊಲೀಸಿನವರು ಮಾಡಿದರೇ? ತಮಿಳುನಾಡು ಪೊಲೀಸಿನವರು ಮಾಡಿದ್ದಾರೆಯೇ? ಯಾರ ಹತ್ತಿರ ಮಲಗಿದರು? ಏನು ಮಾಡಿದರು? ನಾವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ? ಎಸ್.ಟಿಎಫ್.ನವರು ಮಾಡಿದರೇ? ಬಿ.ಎಸ್.ಎಫ್.ನವರು ಮಾಡಿದರಾ ಎಂಬ ಬಗ್ಗೆ ಚರ್ಚೆಯಾಗಲೇಬೇಕಾಗಿದೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಲೇಬೇಕಾಗಿದೆ. ಒಂದು ರಾಜ್ಯದ ಮುಖ್ಯಮಂತ್ರಿಯವರು ಪೊಲೀಸ್ ಬಗ್ಗೆ ಈ ರೀತಿ ಹೇಳಿದರೆ ಹೇಗೆ?

ಛೇರ್ಮನ್: ಲಿಸ್ಟ್ ಆಗಿರತಕ್ಕಂಥಾದ್ದು ಮತ್ತು ಮೊದಲೇ ಸೂಚನೆ ಕೊಟ್ಟಿರತಕಂಥಾದ್ದನ್ನು ನಾನು ಕರೆದಿದ್ದೇನೆ. ಈ ವಿಷಯದ ಬಗ್ಗೆ ತಾವು ನಾಳೆ ಮಾತನಾಡಿ.